[C.R.P.67]

Form No.4 (civil)
Deposition Sheets
(R.P.No.57)

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .**

ಸಿ.ಸಿ. ನಂ. 2669/2024

ಪ್ರಾ.ಸಾ.1 ಚಾ.ಸಾ.1

| | | |
|---|---|---|
| ಸಾಕ್ಷಿದಾರರ ಹೆಸರು | : | ಜ್ಯೋತಿ |
| ಗಂಡನ ಹೆಸರು | : | ಕರಿಬಸಪ್ಪ |
| ವಯಸ್ಸು | : | 45 ವರ್ಷಗಳು |
| ಉದ್ಯೋಗ | : | ಗೃಹಿಣಿ |
| ವಾಸ | : | ಕೆಂಪನಹಳ್ಳಿ ಗ್ರಾಮ, ಚನ್ನಗಿರಿ ತಾಲ್ಲೂಕು. |

ಪ್ರಮಾಣ ವಚನ ಬೋಧಿಸಿದ ದಿನಾಂಕಃ 11-06-2026

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1) ಚಾ.ಸಾ.2 ಮತ್ತು 3 ನನ್ನ ಸಂಬಂಧಿಗಳು, ಚಾಸಾ-4 ನನ್ನ ಗಂಡ, 1ನೇ ಆರೋಪಿ ನನ್ನ ಮೈದುನ. 2ನೇ ಆರೋಪಿ ನನ್ನ ತಂಗಿ.

2) ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ನನಗೆ ಹಲ್ಲೆ ಮಾಡಿಲ್ಲ ಮತ್ತು ಯಾವುದೇ ಕೊಲೆ ಬೆದರಿಕೆ ಹಾಕಿರುವುದಿಲ್ಲ. ಸುಮಾರು ಎರಡು ವರ್ಷಗಳ ಹಿಂದೆ ಆರೋಪಿತರಿಗೂ ಮತ್ತು ನಮಗೂ ಮನೆಯ ಮುಂಭಾಗದ ಜಾಗದಲ್ಲಿ ನೀರು ಹಾಕುವ ವಿಚಾರವಾಗಿ ಮಾತುಕತೆಯಾಗಿತ್ತು ಅಷ್ಟೆ. ಆ ಸಂದರ್ಭದಲ್ಲಿ ಆರೋಪಿತರನ್ನು ಕರೆಯಿಸಿ ಠಾಣೆಗೆ ಬುದ್ದಿ ಹೇಳುವಂತೆ ಕೇಳಿಕೊಂಡಾಗ, ಠಾಣೆಯಲ್ಲಿ ನನ್ನಿಂದ ಕೆಲವು ದಾಖಲಾತಿಗಳಿಗೆ ಸಹಿಯನ್ನು ಪಡೆದುಕೊಂಡಿರುತ್ತಾರೆ, ಯಾವ ದಾಖಲೆಗಳಿಗೆ ಎಂದು ನನಗೆ ಗೊತ್ತಿಲ್ಲ.ನಾನು ಯಾವುದೇ ಚಿಕಿತ್ಸೆಯನ್ನು ಪಡೆದುಕೊಂಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನಿಪಿ.1 ರಲ್ಲಿರುವ ವಿಚಾರ ನನಗೆ ಗೊತ್ತಿಲ್ಲ. ಸಾಕ್ಷಿಯು ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ನಿಪಿ.2 ರಲ್ಲಿರುವ ವಿಚಾರ ನನಗೆ ಗೊತ್ತಿಲ್ಲ.

ಪೊಲೀಸರ ಮುಂದೆ ಯಾವುದೇ ಮುಂದುವರೆದ ಹೇಳಿಕೆ ನೀಡಿಲ್ಲ. ನ್ಯಾಯಾಲಯದ ಮುಂದಿರುವ ತೆಂಗಿನ ಮಟ್ಟೆಯನ್ನು ನಾನು ಈ ಹಿಂದೆ ನೋಡಿಲ್ಲ ಹಾಗೂ ಪೊಲೀಸರ ಮುಂದೆ ನಾನು ಹಾಜರುಪಡಿಸಿಲ್ಲ. ನಿಪಿ.1 ಮತ್ತು 2 ರಲ್ಲಿರುವ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯಾಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೇಳಿಕೊಂಡಿರುತ್ತಾರೆ. ಆಲಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕರಿಂದಃ

1. ದಿನಾಂಕಃ 17-03-2024 ರಂದು ಸಂಜೆ 5-00 ಗಂಟೆ ಸಮಯದಲ್ಲಿ ನಾನು ಮನೆಯ ಮುಂದಿನ ಜಾಗದಲ್ಲಿ ನೀರು ಹಾಕಿದ್ದ ವಿಚಾರದಲ್ಲಿ 1ನೇ ಆರೋಪಿಯು ಚಾಸಾ-4 ರವರನ್ನು ಕುರಿತು ಏ ಸೂಳೆಮಕ್ಕಳ ಯಾವನೋ ನೀರು ಹಾಕಿದ್ದು ಎಂದು ಬೈಯ್ಯುತ್ತಿದ್ದಾಗ ನಾನು ಹೋಗಿ ಕೇಳಿದ್ದಕ್ಕೆ 1ನೇ ಆರೋಪಿಯು ನನಗೆ ಬೋಸುಡಿ ಮುಂಡೆ ಎಂದು ವೈದರು ಎಂದರೆ ಸರಿಯಲ್ಲ. 1ನೇ ಆರೋಪಿಯು ಜಗಳ ಮಾಡುತ್ತಿದ್ದಾಗ ಜಗಳ ಬಿಡಿಸಲು ಬಂದ ಚಾಸಾ-4 ರವರಿಗೆ 1ನೇ ಆರೋಪಿಯು ತೆಂಗಿನ ಮಟ್ಟೆಯಿಂದ ಎಡಗೈ ಮತ್ತು ಬೆನ್ನಿಗೆ ಹೊಡೆದು ಹಾಗೂ ನನಗೆ ಅದೇ ತೆಂಗಿನ ಮಟ್ಟೆಯಿಂದ ತಲೆಗೆ ಹೊಡೆದು ನೊವುಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿತರು ನನ್ನನ್ನು ಮತ್ತು ಚಾಸಾ-4 ರವರನ್ನು ಕುರಿತು ನಿಮ್ಮನ್ನು ಇಷಟಕ್ಕೆ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾನು ಈ ವಿಚಾರವಾಗಿ ದಿನಾಂಕಃ 17-03-2024 ರಂದು ಪೊಲೀಸ್ ಠಾಣೆಗೆ ಹೋಗಿ ನಿಪಿ.1ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ದೂರು ನೀಡಿದ ಮಾರನೇ ದಿನ ನಾನು ಸ್ಥಳ ತೋರಿಸಿದ ಮೇರೆಗೆ ಪೊಲೀಸ್ ನವರು ಬೆಳಿಗ್ಗೆ 11-45 ರಿಂದ 12-45 ಗಂಟೆಯವರೆಗೆ ಚಾ.ಸಾ. 2 ಮತ್ತು ಚಾ.ಸಾ.3 ರವರ ಸಮಕ್ಷಮ ನಿಪಿ.2 ರಂತೆ ಮಹಜರ್ ಕ್ರಮ ಜರುಗಿಸಿ, ನಾನು ಹಾಜರುಪಡಿಸಿದ ಮೇರೆಗೆ ತೆಂಗಿನ ಮಟ್ಟೆಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಪೋಟೋ ತೋರಿಸಿದ್ದು ಸಾಕ್ಷಿ ಸದರಿ ಪೋಟೋವನ್ನು ನೋಡಿ ಪೊಲೀಸರು ಯಾವುದೋ ವಿಚಾರವಾಗಿ ನಮ್ಮ ಊರಿಗೆ ಬಂದಿದ್ದಾಗ ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪೋಟೋವನ್ನು ನಿಪಿ-4 ಎಂದು ಗುರುತಿಸಲಾಯಿತು. ನಾನು ಈ ವಿಚಾರವಾಗಿ ದಿನಾಂಕಃ 18-03-2024

ರಂದು ಪೊಲೀಸ್ ನವರ ಮುಂದೆ "ನಾನು ............. ಬರೆಯಿಸಿರುತ್ತೇನೆ" ಎಂಬ ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ತಿರಸ್ಕರಿಸಿದ ಹೇಳಿಕೆಯ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು.

2. ನಾವು ಮತ್ತು ಆರೋಪಿತರು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ವಿರುದ್ಧ ದಾಖಲಿಸಿರುವ ಪ್ರಕರಣದಲ್ಲಿ ರಾಜಿಯಾಗಿರುವುದರಿಂದ, ನಾವು ಈ ಪ್ರಕರಣದಲ್ಲಿ ರಾಜಿಯಾಗುತ್ತಿದ್ದೇವೆ ಎಂದರೆ ಸರಿಯಲ್ಲ. ಆ ಕಾರಣದಿಂದ ನಾನು ನಿಪಿ.3 ರಂತೆ ಪೊಲೀಸರ ಮುಂದೆ ಮರು ಹೇಳಿಕೆ ನೀಡಿದ್ದರೂ ಹಾಗೂ ನಿಪಿ.1 ಮತ್ತು ನಿಪಿ.2 ರವರ ವಿಚಾರ ಗೊತ್ತಿದ್ದರೂ ಸಹಾ ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರುಃ ಇಲ್ಲ ಎಂದು ನುಡಿಯುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಗಾರ್ತಿಯ ಮೂಲಕ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**Sd/-**
**02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**